**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಉಡುಪಿ ಜಿಲ್ಲೆ , ಉಡುಪಿ.**

**<u>ಸೆಷನ್ಸ್ ಕೇಸ್ ನಂಃ 6/2024</u>** **<u>ಫ್ರಾ.ಸಾ.11</u>**

**<u>ಚಾ.ಸಾ.15</u>**

| | | |
|---|---|---|
| ಸಾಕ್ಷಿದಾರರ ಹೆಸರು | - | ಅಮೀನಾ |
| ಗಂಡನ ಹೆಸರು | - | ಮುನೀರ್ |
| ವಯಸ್ಸು | - | 37 ವರ್ಷ |
| ಉದ್ಯೋಗ | - | ಗೃಹಿಣಿ |
| ವಿಳಾಸ | - | ನೇಜಾರು. |

ದಿನಾಂಕಃ 17.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದಃ</u>**

1. ತೃಪ್ತಿ ಲೇಔಟ್ ನಲ್ಲಿರುವ ನಮ್ಮ ಮನೆ ಮುಖ್ಯ ರಸ್ತೆಗೆ ಮುಖ ಮಾಡಿ ಇದೆ. ನಮ್ಮ ಮನೆಯ ಪಕ್ಕ ಚಾಸಾ12 ರವರ ಮನೆ ಇದೆ. ನಮ್ಮ ಮನೆಯ ಮತ್ತೊಂದು ಬದಿಯಲ್ಲಿ ಮುಖ್ಯ ರಸ್ತೆಯಿಂದ ತೃಪ್ತಿ ಲೇಔಟ್ ಗೆ ಹೋಗುವ ಅಡ್ಡ ರಸ್ತೆ ಇದೆ. ಅಡ್ಡ ರಸ್ತೆಯ ಮತ್ತೊಂದು ಬದಿಯಲ್ಲಿ ಹಸೀನಾರವರ ಮನೆ ಇದೆ. ಹಸೀನಾರವರ ಮನೆಯ ಪಕ್ಕದಲ್ಲಿ ಚಾಸಾ.8 ಅಯುಬ್ ರವರ ಮನೆ ಇದೆ. ನಿಪಿ-61 ರಲ್ಲಿ ಕಾಣುವ ಮನೆ ನನ್ನ ಮನೆಯಾಗಿರುತ್ತದೆ. ನಿಪಿ-61 ರಲ್ಲಿ ಕಾಣುವ ಮತ್ತೊಂದು ಮನೆ ಹಸೀನಾರವರ ಮನೆ ಆಗಿರುತ್ತದೆ.

2. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಇಬ್ಬರು ಮಕ್ಕಳು ವಾಸ ಮಾಡುತ್ತೇವೆ. ನನ್ನ ಗಂಡ ದುಬೈನಲ್ಲಿ ಕೆಲಸ ಮಾಡುತ್ತಿದ್ದು, ಈ ಪ್ರಕರಣದ ಘಟನೆಯ ಸಮಯದಲ್ಲಿ ಊರಿಗೆ

ಬಂದಿದ್ದರು. ಹಸೀನಾರವರ ಗಂಡ ಸೌದಿ ಅರೇಬಿಯಾದಲ್ಲಿ ಇರುತ್ತಾರೆ. ಹಸೀನಾರವರ ದೊಡ್ಡ ಮಗ ಬೆಂಗಳೂರಿನಲ್ಲಿ ಮತ್ತು ಇಬ್ಬರು ಹೆಣ್ಣು ಮಕ್ಕಳು ಮಂಗಳೂರಿನಲ್ಲಿ ವಾಸವಿದ್ದು ರಜೆ ಇರುವಾಗ ಮನೆಗೆ ಬಂದು ಹೋಗುತ್ತಿದ್ದರು. ಮನೆಯಲ್ಲಿ ಹಸೀನಾ ಮತ್ತು ಅವರ ಸಣ್ಣ ಮಗ ಆಸೀಮ್ ಇರುತ್ತಿದ್ದರು. ಹಸೀನಾರವರ ಅತ್ತೆ ಹಾಜಿರಾ ಅವರ ಮನೆಗೆ ಬಂದು ಹೋಗುತ್ತಿದ್ದರು.

3. ದಿನಾಂಕ 12-11-2023 ರಂದು ಹಸೀನಾ, ಇಬ್ಬರು ಹೆಣ್ಣು ಮಕ್ಕಳ ಮತ್ತು ಸಣ್ಣ ಮಗನ ಕೊಲೆ ಆಗಿರುತ್ತದೆ. ಆ ದಿನ ಬೆಳಿಗ್ಗೆ ನನ್ನ ಗಂಡ ತಿಂಡಿ ಪಾರ್ಸೆಲ್ ತರಲು ಹೋಟೆಲ್ ಗೆ ಹೋಗಿದ್ದರು. ಆಗ ಮನೆಯಲ್ಲಿ ನಾನು ಮತ್ತು ನನ್ನ ಮಕ್ಕಳು ಇದ್ದೆವು. ಬೆಳಿಗ್ಗೆ ಸುಮಾರು 8-50 ರ ಸಮಯದಲ್ಲಿ ಹಸೀನಾರವರ ಮನೆಯಿಂದ ಕೂಗಾಡುವ ಶಬ್ದ ಕೇಳಿರುತ್ತದೆ. ಆಗ ನಾವು ಹಸೀನಾರವರ ಅತ್ತೆ ಕೂಗಾಡುತ್ತಿರಬಹುದು ಎಂದು ಭಾವಿಸಿದೆ. ಸುಮಾರು ಬೆಳಿಗ್ಗೆ 9-10 ರ ಸಮಯದಲ್ಲಿ ಹಸೀನಾರವರ ಮನೆಯಿಂದ ಮತ್ತೆ ಚೀರಾಟದ ಶಬ್ದ ಕೇಳಿಸಿತು. ಆಗ ನಾನು ನೋಡಿದಾಗ ಐಫಾ ಮತ್ತು ಆಕೆಯ ತಾಯಿರವರು ಹಸೀನಾರವರ ಮನೆಯ ಮುಂದೆ ಕೂಗಾಡುತ್ತಿದ್ದರು. ನಾನು ಕೂಡಲೇ ಹಸೀನಾರವರ ಮನೆಯ ಹತ್ತಿರ ಹೋದೆ. ಚಾಸಾ10 ಮತ್ತು ಅವರ ಅತ್ತೆ ಅಲ್ಲಿಗೆ ಬಂದಿದ್ದರು.

4. ಆಗ ಶಾಹೀನ್ ಬೀಬಿ ಮತ್ತು ಐಫಾ ಅಳುತ್ತಿದ್ದರು. ಮನೆಯ ಅಂಗಳದಲ್ಲಿ ಆಸೀಮ್ ನ ಸೈಕಲ್ ಬಿದ್ದಿತ್ತು. ನಾನು ಐಫಾಳನ್ನು ವಿಚಾರಿಸಿದಾಗ ಆಕೆ ಆಸೀಮ್ ನ ಕೊಲೆ ಆಗಿದೆ ಎಂದು ಹೇಳಿದಳು. ನಾನು ಹಸೀನಾರವರ ಮನೆಯ ಬಾಗಿಲನ್ನು ಸ್ವಲ್ಪ ಸರಿಸಿ ನೋಡಿದಾಗ ಆಸೀಮ್ ನ ದೇಹ ರಕ್ತದ ಮಡುವಿನಲ್ಲಿ ಬಿದ್ದಿತ್ತು. ಆ ಸಮಯದಲ್ಲಿ ಮನೆಯ ಬೇರೆ ಯಾರೂ ಕಾಣಿಸಲಿಲ್ಲ. ಅದನ್ನು ನೋಡಿ ನಾನು ಮನೆಯಿಂದ ಹೊರಗೆ ಬಂದೆ. ಐಫಾಳು ಐನಾಜ್ ಮತ್ತು ಅಫನಾನ್ ಗೆ

ಕರೆ ಮಾಡಿದಳು, ಆದರೆ ಅವರು ಕರೆ ಸ್ವೀಕರಿಸಲಿಲ್ಲ. ಅದಕ್ಕೆ ಆಕೆ ತನ್ನ ಚಿಕ್ಕಪ್ಪ ಮತ್ತು ತಂದೆಗೆ ಕರೆ ಮಾಡಿದ್ದಾಳೆ. ಆ ನಂತರ ಸ್ಥಳಕ್ಕೆ ಐಫಾಳ ತಂದೆ, ಅಶ್ರಫ್, ಆಯುಬ್ ಬಂದರು. ಆ ಸಮಯಕ್ಕೆ ಪೋಲಿಸರು ಸಹಾ ಬಂದಿದ್ದರು. ನಂತರ ನೋಡಲಾಗಿ, ಮನೆಯೊಳಗೆ ಹಸೀನಾ ಡೈನಿಂಗ್ ಹಾಲ್ ನಲ್ಲಿ, ಪ್ಯಾಸೇಜಿನಲ್ಲಿ ಐನಾಜ್, ಬೆಡ್ ರೂಮಿನ ಬೆಡ್ ಮೇಲೆ ಅಫನಾನ್ ರಕ್ತದ ಮಡುವಿನಲ್ಲಿ ಬಿದ್ದಿದ್ದರು. ಅವರಿಗೆ ಚೂರಿಯಿಂದ ಹಲ್ಲೆ ಮಾಡಿರುವುದು ಕಂಡುಬಂತು. ಮನೆಯ ವಾಶ್ ರೂಮಿನಿಂದ ಶಬ್ದ ಕೇಳಿಸಿತು. ವಾಶ್ ರೂಮಿನ ಬಾಗಿಲನ್ನು ಬಲವಾಗಿ ತಳ್ಳಿ ನೋಡಿದಾಗ ವಾಶ್ ರೂಮಿನಲ್ಲಿ ಅಜ್ಜಿ ಹಾಜಿರಾಗೆ ಗಾಯ ಆಗಿ ರಕ್ತ ಬರುತ್ತಿತ್ತು. ಆಕೆಯನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ನಂತರ ಆಸ್ಪತ್ರೆಗೆ ಕರೆದುಕೊಂಡು ಹೋದರು.

5. ಐಫಾಳನ್ನು ವಿಚಾರಿಸಿದಾಗ, ಆಕೆ ಹಸೀನಾರವರ ಚೀರಾಟದ ಶಬ್ದ ಕೇಳಿಸಿತು, ಅದಕ್ಕೆ ನಾವು ಅಜ್ಜಿ ಹಾಜಿರ ಚೀರಾಡಿರಬಹುದು ಎಂದು ಗ್ರಹಿಸಿದ್ದೆವು, ಅಫನಾನ್ ಮತ್ತು ಐನಾಜ್‌ಗೆ ಕರೆ ಮಾಡಿದರೆ ಅವರು ಕರೆ ಸ್ವೀಕರಿಸಲಿಲ್ಲ, ನಂತರ ನಾನು ಹೊರಗೆ ಬಂದು ನೋಡಿದಾಗ ಹಸೀನಾ ರವರ ಮನೆಯಿಂದ ಒಬ್ಬ ದೃಢಕಾಯದ ವ್ಯಕ್ತಿ ಕೈಯಲ್ಲಿ ಕಪ್ಪು ಬಣ್ಣದ ಲ್ಯಾಪ್ ಟಾಪ್ ಬ್ಯಾಗ್ ಹಿಡಿದುಕೊಂಡು ಮನೆಯ ಒಳಗಿನಿಂದ ಹೊರಗೆ ಬಂದು ಮುಖ್ಯ ರಸ್ತೆಯ ಕಡೆಗೆ ಹೋಗಿರುವುದನ್ನು ನೋಡಿರುವುದಾಗಿ ತಿಳಿಸಿದಳು. ನಂತರ ಪುನಃ ನಾನು ಅಫನಾನ್ ಮತ್ತು ಐನಾಜ್ ಗೆ ಕರೆ ಮಾಡಿದೆ, ಆದರೆ ಅವರು ಕರೆ ಸ್ವೀಕರಿಸಲಿಲ್ಲ ಎಂದು ತಿಳಿಸಿದಳು. ನಂತರ ಹಸೀನಾರವರ ಮನೆಗೆ ಹೋಗಿ ಬಾಗಿಲು ತೆರೆದು ನೋಡಿದಾಗ ಆಸೀಮ್ ರಕ್ತದ ಮಡುವಿನಲ್ಲಿ ಬಿದ್ದಿದ್ದನ್ನು ನೋಡಿ ನಾವು ಚೀರಾಡಿದ್ದೇವೆ ಎಂದು ತಿಳಿಸಿದಳು. ಹಸೀನಾರವರ ಮನೆಯ ಒಳಗಿನಿಂದ ಹೊರಗೆ ಬಂದು ಕಪ್ಪು ಬ್ಯಾಗ್ ಹಿಡಿದುಕೊಂಡು ಮುಖ್ಯ ರಸ್ತೆ ಕಡೆಗೆ ಹೋದ ವ್ಯಕ್ತಿಯೇ

ಕೊಲೆ ಮಾಡಿರಬಹುದು ಎಂದು ನಮಗೆ ಅನಿಸಿತು. ಘಟನೆಯ ಒಂದು ದಿವಸ ಮೊದಲು ಶನಿವಾರದಂದು ನಾನು ಹಸೀನಾರವರ ಜೊತೆ ಮಾತನಾಡಿರುತ್ತೇನೆ, ಆಕೆ ಯಾವುದೇ ಸಮಸ್ಯೆ ಇರುವುದು ಕಂಡುಬರಲಿಲ್ಲ. ಅದೇ ಶನಿವಾರ ಸಂಜೆ ಸಮಯದಲ್ಲಿ ನಾನು ಐನಾಜ್ ಮತ್ತು ಅಫನಾನ್ ರವರನ್ನು ಅವರ ಮನೆಯಲ್ಲಿ ಇರುವುದನ್ನು ನೋಡಿರುತ್ತೇನೆ ಮತ್ತು ಅವರನ್ನು ಮಾತನಾಡಿಸಿರುತ್ತೇನೆ. ಈ ಪ್ರಕರಣದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ಆರ್.ಪಿ.(LADC) ವಕೀಲರಿಂದ:**

1. ನಮ್ಮ ಮನೆ ಮುಖ್ಯ ರಸ್ತೆಗೆ ಮುಖ ಮಾಡಿ ಇದೆ ಎಂದು ಪೋಲಿಸರಲ್ಲಿ ಹೇಳಿದ್ದೇನೆ. ಅಂಗಳದಲ್ಲಿ ಸೈಕಲ್ ಬಿದ್ದಿದ್ದ ವಿಚಾರವನ್ನು ಪೋಲಿಸರಲ್ಲಿ ಹೇಳಿದ್ದೇನೆ. ಈ ವಿಷಯಗಳನ್ನು ಪೋಲಿಸರ ಮುಂದೆ ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಗೆ ಮತ್ತು ಹಸೀನಾ ರವರ ಮನೆಗೆ ಸುಮಾರು 30 ಮೀ. ಅಂತರ ಇರಬಹುದು. ನಮ್ಮ ಮನೆ ಉತ್ತರ ದಿಕ್ಕಿಗೆ ಮುಖ ಮಾಡಿ ಇದೆ. ಹಸೀನಾರವರ ಮನೆ ನಮ್ಮ ಮನೆ ಕಡೆ ಮುಖ ಮಾಡಿದೆ, ಆದರೆ ದಿಕ್ಕು ಹೇಳಲು ಆಗುವುದಿಲ್ಲ. ನಮ್ಮ ಮನೆ ಮತ್ತು ಜಾಗ ಸುಮಾರು 10 ಸೆಂಟ್ಸ್ ಇದೆ.

2. ನಮ್ಮ ಮನೆಯ ಎಡ ಭಾಗಕ್ಕೆ ತೃಪ್ತಿ ಲೇ-ಔಟ್ ಗೆ ಹೋಗುವ ರಸ್ತೆ ಇದೆ. ಹಸೀನಾರವರ ಮನೆಗೆ ನಾನು ಹೋಗಬೇಕಾದರೆ ಮುಖ್ಯ ರಸ್ತೆಗೆ ಬಂದು ನಂತರ ಅವರ ಮನೆ ಕಡೆ ಹೋಗ ಬೇಕಾಗುತ್ತದೆ. ನಮ್ಮ ಮತ್ತು ಫರಾನಾರವರ ಮನೆಗಳು ಮುಖ್ಯ ರಸ್ತೆಗೆ ಇರುವ ಕಾರಣ ನಾವು ಯಾವಾಗಲೂ ಕಿಟಕಿ ಮತ್ತು ಬಾಗಿಲುಗಳನ್ನು ಮುಚ್ಚಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.61 ರಲ್ಲಿ ದೊಡ್ಡದಾಗಿ ಕಾಣುವ ಮನೆ ನನ್ನ ಮನೆ. ನಿಪಿ-60 ರಲ್ಲಿ ಕಾಣುವ ಮನೆ ಫರಾನಾ ರವರ ಮನೆ. ನಿಪಿ-60 ಮತ್ತು 61 ರ ಭಾವ ಚಿತ್ರಗಳನ್ನು ಘಟನೆಯ ದಿವಸ ತೆಗೆದಿದ್ದಾರೆ. ನಿಪಿ-61 ರಲ್ಲಿ ನನ್ನ

ಮನೆಯ ಕಿಟಕಿ ಮುಚ್ಚಿರುವುದು ಕಾಣುತ್ತದೆ ಎಂದರೆ ಸರಿ. ಹಸೀನಾರವರ ಮನೆಯ ಬಳಿ ಬೊಬ್ಬೆ ಕೇಳಿ ಹೋದಾಗ ಬೆಳಿಗ್ಗೆ 9-10 ಆಗಿತ್ತು. ಆವಾಗ ಅವರ ಮನೆಯ ಬಳಿ ಐಫಾ ಮತ್ತು ಶಾಹೀನಾ ಇದ್ದರು. ನಾನು ಹೋದ ನಂತರದಲ್ಲೂ ಐಫಾಳು ಐನಾಜ್ ಮತ್ತು ಅಫನಾನ್ ರವರಿಗೆ ಕರೆ ಮಾಡಿದಳು. ಮನೆ ಬಳಿ ಹೋದಾಗ ಐಫಾ ಘಟನೆ ಬಗ್ಗೆ ತಿಳಿಸಿದಳು. ಮೊದಲು ನಾನು ಮನೆಯ ಒಳಗೆ ಹೋಗಿರುವುದಿಲ್ಲ, ಹೊರಗಿನಿಂದ ನೋಡಿರುತ್ತೇನೆ. ಅಶ್ರಫ್‌ಗೆ ಐಫಾ ಕರೆ ಮಾಡಿದಾಗ ಬೆಳಿಗ್ಗೆ ಸುಮಾರು 9-20 ಆಗಿರಬಹುದು. ಐಫಾ ತನ್ನ ತಂದೆಗೂ ಸಹಾ ಕರೆ ಮಾಡಿರುತ್ತಾಳೆ. ಐಫಾ ಕರೆ ಮಾಡಿದ ಸುಮಾರು ಅರ್ಧ ತಾಸಿನಲ್ಲಿ ಅಶ್ರಫ್ ಸ್ಥಳಕ್ಕೆ ಬಂದಿರುತ್ತಾರೆ.

3. ಅಶ್ರಫ್ ಬರುವ ಮೊದಲು ಸುಮಾರು 10 ಜನರು ರಸ್ತೆಯ ಬದಿ ಸೇರಿದ್ದರು. ಅವರು ಯಾರೂ ಮನೆಯ ಒಳಗೆ ಹೋಗಿಲ್ಲ. ಅಶ್ರಫ್ ಸ್ಥಳಕ್ಕೆ ಬಂದ ನಂತರದಲ್ಲಿ ಸುಮಾರು ಅರ್ಧ ತಾಸಿನ ನಂತರ ಪೋಲಿಸರು ಬಂದಿರುತ್ತಾರೆ. ಎಷ್ಟು ಜನ ಪೋಲಿಸರು ಬಂದಿರುತ್ತಾರೆ ಹೇಳಲು ಆಗುವುದಿಲ್ಲ. ಘಟನೆಯ ಬಗ್ಗೆ ಅಶ್ರಫ್ ಪೋಲಿಸರಿಗೆ ಮಾಹಿತಿ ಕೊಟ್ಟಿರುತ್ತಾರೆ. ಅಶ್ರಫ್ ಸ್ಥಳಕ್ಕೆ ಬಂದಾಗ ಐಫಾ ಮತ್ತು ಆಕೆಯ ತಾಯಿ ಸ್ಥಳದಲ್ಲಿ ಇದ್ದರು. ಪೋಲಿಸರು ಬಂದ ನಂತರದಲ್ಲಿ ನಾವು ಮನೆಯ ಒಳಗೆ ಹೋಗಿದ್ದೇವೆ. ಎಷ್ಟು ಜನ ಮನೆ ಒಳಗೆ ಹೋಗಿದ್ದೇವೆ ಹೇಳಲು ಆಗುವುದಿಲ್ಲ. ಮನೆಯಲ್ಲಿ ರಕ್ತ ಚೆಲ್ಲಾಡಿತ್ತು. ರಕ್ತ ತಾಗಿದ ಹೆಜ್ಜೆಯ ಗುರುತುಗಳು ಕಾಣುತ್ತಿತ್ತು. ಗೋಡೆಗೆ ಮತ್ತು ಬೇರೆ ವಸ್ತುಗಳ ಮೇಲೆ ರಕ್ತ ತಾಗಿತ್ತು. ಗೋಡೆಗೆ ರಕ್ತ ತಾಗಿದ ಕೈಬೆರಳುಗಳ ಅಚ್ಚು ಕಂಡು ಬಂದಿರುತ್ತದೆ. ಅದನ್ನೆಲ್ಲಾ ಪೋಲಿಸರು ಪರಿಶೀಲನೆ ಮಾಡಿರುತ್ತಾರೆ. ಹಾಜಿರಾ ರವರನ್ನು ಮನೆಯ ಒಳಗಿನಿಂದ ಯಾರು ಕರೆದುಕೊಂಡು ಬಂದಿದ್ದಾರೆ ಹೇಳಲು ಆಗುವುದಿಲ್ಲ. ಆಕೆಗೆ ಎಲ್ಲೆಲ್ಲಿ ಪೆಟ್ಟಾಗಿತ್ತು ಹೇಳಲು ಆಗುವುದಿಲ್ಲ. ಹಾಜಿರಾ ಮಾತನಾಡಿಸಿದರೆ ಮಾತನಾಡುವ

ಸ್ಥಿತಿಯಲ್ಲಿ ಇರಲಿಲ್ಲ. ಪೋಲಿಸರು ಹಾಜಿರಾಳನ್ನು ವಿಚಾರಿಸಿದ್ದಾರೋ, ಇಲ್ಲವೋ ಗೊತ್ತಿಲ್ಲ. ಆಕೆಯನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಗೊತ್ತಿಲ್ಲ.

4. ಐಫಾಳನ್ನು ಹಸೀನಾರವರ ಮನೆಯ ಅಂಗಳದಲ್ಲಿ ವಿಚಾರಿಸಿರುತ್ತೇನೆ. ಆವಾಗ ಸಮಯ ಬೆಳಿಗ್ಗೆ ಸುಮಾರು 9-20 ಆಗಿರಬಹುದು. ಐಫಾ ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಬದಲ್ಲಿ ಐಫಾ ನನಗೆ ಮಾಹಿತಿ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹಸೀನಾ ಮತ್ತು ಆಕೆಯ ಮಕ್ಕಳ ವೈಯಕ್ತಿಕ ಬದುಕಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಘಟನೆಯ ದಿವಸ ಪೋಲಿಸರು ನನ್ನನ್ನು ವಿಚಾರಿಸಿರುತ್ತಾರೆ. ಹಸೀನಾರವರ ಮನೆಗೆ ಸಾಮಾನ್ಯವಾಗಿ ಯಾರೆಲ್ಲಾ ಬಂದು ಹೋಗುತ್ತಾರೆ ನನಗೆ ಮಾಹಿತಿ ಇಲ್ಲ. ಹಸೀನಾರವರು ಲೇವಾದೇವಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ಗೊತ್ತಿಲ್ಲ. ಘಟನೆ ದಿನ ಹೊರತುಪಡಿಸಿ ನಂತರದಲ್ಲೂ ಪೋಲಿಸರು ನನ್ನನ್ನು ವಿಚಾರಿಸಿರುತ್ತಾರೆ. ನನಗೆ ಈ ಪ್ರಕರಣದ ತಕ್ಷೀರಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ತಕ್ಷೀರು ನಡೆದಿದೆ ಎನ್ನಲಾದ ದಿನ ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ನನಗೆ ಯಾವುದೇ ಮಾಹಿತಿ ಸಿಕ್ಕಿಲ್ಲ ಎಂದರೆ ಸರಿಯಲ್ಲ. ಐಫಾ ನನ್ನ ಸಮಕ್ಷಮ ಯಾವುದೇ ಕರೆ ಮಾಡಿಲ್ಲ ಎಂದರೆ ಸರಿಯಲ್ಲ. ಮೃತರು ನನ್ನ ನೆರೆಮನೆಯವರಾದ ಕಾರಣ ಅವರ ಕುಟುಂಬದವರಿಗೆ ಸಹಾಯ ಮಾಡಲು ಪೋಲಿಸರು ತಿಳಿಸಿದ ರೀತಿಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

SC 6/2024
PW.11

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.